# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಡಿಸೆಂಬರ್ 21, 2024

ಸಂಪುಟ : 51 ಸಂಚಿಕೆ : 218 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಸಿಟಿ ರವಿ ದಾವಣಗೆರೆಯಲ್ಲಿ ಬಂಧ ಮುಕ್ತ



### ಸತ್ಯಕ್ಕೆ ಜಯ ಸಿಕ್ಕಿದೆ: ಸಿ.ಟಿ. ರವಿ, ಸರ್ಕಾರಕ್ಕೆ ಕಪಾಳ ಮೋಕ್ಷ : ವಿಜಯೇಂದ್ರ

### ಮಾನವ ಹಕ್ಕುಗಳ ಉಲ್ಲಂಘನೆ, ಆಯೋಗಕ್ಕೆ ದೂರು ಆರ್.ಅಶೋಕ್

ದಾವಣಗೆರೆ ಡಿ. 20 - 'ಸತ್ಯಕ್ಕೆ ಜಯ ಸಿಕ್ಕಿದೆ' ಎಂದು ಬೆಳಗಾವಿ ಘಟನೆ ಸಂಬಂಧ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಬೆಳಗಾವಿಯಿಂದ ಬೆಂಗಳೂರಿಗೆ ತೆರಳುವ ಮಾರ್ಗ ಮಧ್ಯೆ ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಶುಕ್ರವಾರ ಸಂಜೆ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಪೊಲೀಸರನ್ನು ಬಳಸಿಕೊಂಡು ನನ್ನ ಬಲ ಕುಗ್ಗಿಸುವ ಪ್ರಯತ್ನ ಮಾಡಿತು. ಆದರೆ ಕಳೆದ 35 ವರ್ಷಗಳಿಂದ ನಾನು ಇಂತಹ ಅನೇಕ ದೌರ್ಜನ್ಯ, ಸಂಕಷ್ಟಗಳನ್ನು ಅನುಭವಿಸಿದ್ದೇನೆ. ಸರ್ಕಾರ ನೀಡುವ ತೊಂದರೆ ನನಗೆ ಹೋರಾಟ ಮಾಡಲು ಇನ್ನಷ್ಟು ಶಕ್ತಿ ನೀಡುತ್ತದೆ ಎಂದು ಹೇಳಿದರು.

ಯಾವುದೇ ನೋಟಿಸ್ ನೀಡದೆ ನನ್ನನ್ನು ಬಂಧಿಸಲಾಯಿತು. ನಾಲ್ಕು ಜಿಲ್ಲೆಯ 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ಅಲೆದಾಡಿಸಿ, ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನ ಮಾಡಿದರು. ದೈಹಿಕವಾಗಿ ಹಲ್ಲೆ ನಡೆಸುವ ಪ್ರಯತ್ನವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಈ ಸಮಯದಲ್ಲಿ ಪಕ್ಷದ ಮುಖಂಡರು, (2ನೇ ಪುಟಕ್ಕೆ)

## ಬಂಧನಕ್ಕೆ ಸರಿಯಾದ ಪ್ರಕ್ರಿಯೆ ಪಾಲಿಸಿಲ್ಲ ಎಂಬ ವಾದಕ್ಕೆ ಕೋರ್ಟ್ ಪುರಸ್ಕಾರ

**ಸಿ.ಟಿ. ರವಿ ಬಿಡುಗಡೆಗೆ ಹೈಕೋರ್ಟ್ ಆದೇಶ**

ಬೆಂಗಳೂರು. ಡಿ. 20 - ಬಿಜೆಪಿ ಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಕರ್ನಾಟಕ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. ನಂತರ ರವಿ ಅವರನ್ನು ದಾವಣಗೆರೆಯಲ್ಲಿ ಬಿಡುಗಡೆ ಮಾಡಲಾಗಿದೆ.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ವಿರುದ್ಧ ಅವಹೇಳನಕಾರಿ ಮಾತುಗಳನ್ನ ಆಡಿದ ಆರೋಪದ ಮೇಲೆ ರವಿ ಬಂಧಿಸಲಾಗಿತ್ತು.

ಆದರೆ, ಬಂಧನದ ವೇಳೆ ಸರಿಯಾದ ಪ್ರಕ್ರಿಯೆ ಪಾಲಿಸಿಲ್ಲ ಎಂದು ಹೇಳಿರುವ ನ್ಯಾಯ ಮೂರ್ತಿ ಎಂ.ಜಿ. ಉಮಾ ಅವರ ಪೀಠ, ಜಾಮೀನು ನೀಡಿದೆ. ಆದರೆ ತನಿಖೆಗೆ ಸಹಕಾರ ನೀಡಬೇಕು ಹಾಗೂ ವಿಚಾರಣೆಗೆ ಲಭ್ಯವಿರಬೇಕು ಎಂದು ಷರತ್ತು ವಿಧಿಸಿದೆ.

ಗುರುವಾರ ವಿಧಾನಪರಿಷತ್‌ನಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ರವಿ (2ನೇ ಪುಟಕ್ಕೆ)

## ಚನ್ನಗಿರಿ ಶಾಸಕರಿಗೆ ಖಡಕ್ ಎಚ್ಚರಿಕೆ ನೀಡಿದ ಸಹೋದರ ಶಿವಗಂಗಾ ಶ್ರೀನಿವಾಸ್



ದಾವಣಗೆರೆ, ಡಿ.20- ಚನ್ನಗಿರಿ ಶಾಸಕರೇ ನೀವು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರಿಗೆ ಪತ್ರ ಬರೆಯುವುದನ್ನು ಬಿಟ್ಟು, ಮೊದಲು ನಿಮ್ಮ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಗಮನಹರಿಸಿ ಎಂದು ಶಾಸಕ ಶಿವಗಂಗಾ ಬಸವರಾಜ್ ಅವರಿಗೆ ಸಹೋದರ, ಉದ್ಯಮಿ ಶಿವಗಂಗಾ ಶ್ರೀನಿವಾಸ್ ಖಡಕ್ ಎಚ್ಚರಿಕೆ ನೀಡಿದರು.

ಶಾಸಕರೇ ನೀವು ದೊಡ್ಡವರ ಬಗ್ಗೆ ಗೌರವದಿಂದ ನಡೆದುಕೊಳ್ಳುವುದನ್ನು ಮೊದಲು ಕಲಿಯಿರಿ. ಅದನ್ನು ಬಿಟ್ಟು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಬಗ್ಗೆ ಹೈಕಮಾಂಡ್‌ಗೆ ಪತ್ರ ಬರೆದು ನೀವೇನೂ ದೊಡ್ಡವರಾಗುವುದಿಲ್ಲ. ಏಕೆಂದರೆ, ಹೈಕಮಾಂಡ್‌ಗೆ ಎಸ್.ಎಸ್ ಕುಟುಂಬದವರು ಪಕ್ಷಕ್ಕೆ ಎಷ್ಟು ಸೇವೆ ಸಲ್ಲಿಸಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೀಗಾಗಿ ನೀವು ಮೊದಲು (2ನೇ ಪುಟಕ್ಕೆ)

## ಶಾಸಕ ಸಿ.ಟಿ.ರವಿ ವರ್ತನೆ ಬಗ್ಗೆ ಲಕ್ಷ್ಮಿ ಹೆಬ್ಬಾಳ್ಕರ್ ಕಿಡಿ



ಬೆಂಗಳೂರು, ಡಿ. 20- ಬಿಜೆಪಿ ಶಾಸಕ ಸಿ.ಟಿ.ರವಿ ಅವರ ವರ್ತನೆ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕಿಡಿ ಕಾರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಂತಕರ ಛಾವಡಿಯಲ್ಲಿ ರವಿ ಅವರು ನನ್ನ ವಿರುದ್ಧ ಹೇಯವಾಗಿ ವರ್ತಿಸಿದ್ದಾರೆ ಮತ್ತು ಬಳಸಬಾರದ ಪದ ಬಳಸಿದ್ದಾರೆ. ಅಅವರ ವರ್ತನೆ ಮತ್ತು ಪದಗಳ ಬಳಕೆ ಎಲ್ಲರ ಸಮ್ಮುಖದಲ್ಲೇ ನಡೆದಿದೆ, ನಾನು ಏತಕ್ಕೆ ಸುಳ್ಳು ಹೇಳಲಿ ಎಂದು ಸಮರ್ಥಿಸಿಕೊಂಡರು.

ರಾಜಕಾರಣದಲ್ಲಿ ಬಹಳಷ್ಟು ಧೈರ್ಯದಿಂದ ಮುಂದೆ ಬಂದು ನಾನು ಈ ಮಟ್ಟಕ್ಕೆ ಬೆಳೆದಿದ್ದೇನೆ, ನನ್ನನ್ನು ನೋಡಿ ಸಾವಿರಾರು ಮಹಿಳೆಯರು (2ನೇ ಪುಟಕ್ಕೆ)

## ಭತ್ತಾ ಕಟಾವಿಗೆ ಗಂಟೆಗೆ ರೂ. 2600 ದರ ನಿಗದಿ

ದಾವಣಗೆರೆ, ಡಿ. 20 - ಪ್ರಸಕ್ತ ಸಾಲಿನಲ್ಲಿ ಭತ್ತ ಕಟಾವು ಮಾಡಲು ಪ್ರತಿ ಗಂಟೆಗೆ ಯಂತ್ರಕ್ಕೆ ರೂ. 2600 ಗಳ ಗರಿಷ್ಠ ದರ ನಿಗದಿ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಆದೇಶಿಸಿದ್ದಾರೆ. ಭತ್ತ ಕಟಾವು ಯಂತ್ರದ ಮಾಲೀಕರು ಈ ದರ ಮೀರದಂತೆ ಭತ್ತ ಕಟಾವು ಕೈಗೊಳ್ಳಬೇಕು. ಖಾಸಗಿ ಭತ್ತ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಹೆಚ್ಚಿನ ದರ ಪಡೆದರೆ ವಿಪತ್ತು ನಿರ್ವಹಣಾ ಕಾಯ್ದೆಯನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದು. ಭತ್ತ ಕಟಾವು ಯಂತ್ರದ ಮಾಲೀಕರು ರೈತರಿಂದ ಹೆಚ್ಚಿನ ದರ ಪಡೆದಲ್ಲಿ ರೈತರು ಕಂದಾಯ ಅಥವಾ ಕೃಷಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಿದ್ದಾರೆ.

**ನೇತ್ರದಾನ ಶ್ರೇಷ್ಠದಾನ**





KJ HYUNDAI
http://kj.hyundaimotor.in
info@kjhyundai.in

Head Office: # 371/271, P.B.Road, Avaragere, Davanagere. Ph: 7022042241, 7022001205
Branch: NH-13, Holalkere Road, Channagiri. Ph: 6366508866, 7022898487.
Branch: Near BVKS Layout, Bheemasamudra Main Road, Chitradurga. Ph: 9980759983, 7022001208.
Branch: Plot No. 112, P.B.Road, Mruthyunjaya Nagar, Ranebennuru. Ph: 7406555311, 9606738752



ಶ್ಯಾಬನೂರಿನಲ್ಲಿ ಇಂದು ಕಾರ್ತಿಕೋತ್ಸವ ಸಾಮೂಹಿಕ ವಿವಾಹ

ಶ್ರೀ ಮಹಾಂತರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ
ದಿನಾಂಕ 21.12.2024ರ ಶನಿವಾರ
ಬೆಳಿಗ್ಗೆ 10.30ಕ್ಕೆ ಸಾಮೂಹಿಕ ವಿವಾಹ
ಸಂಜೆ ಕಾರ್ತಿಕ ದೀಪೋತ್ಸವ

ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...

ಐದನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಕೂಡ್ಲೆಮ್ಮ ಗುರುಸಿದ್ದಪ್ಪ ಸುಂಕದ್

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ಶ್ರೀ ಎಸ್.ಜಿ. ಮಂಜುನಾಥ,
ಶ್ರೀಮತಿ ಅನುರಾಧ, ಕು|| ಪಾವನಾ
ಮತ್ತು ಸುಂಕದ್ ವಂಶಸ್ಥರು.
ದಾವಣಗೆರೆ, ಫೋ. : 82775 96953

ಶಿವ ಸಹಕಾರಿ ಬ್ಯಾಂಕ್ ನಿ.,
ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ
ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ - 2024



ಉಮಾ ಡಿ.ಹೆಚ್.
ಕಾಕನೂರು ಗೌಡ್ರ ದುಮ್ಮಿ ಹಾಲಪ್ಪ ಅಂಡ್ ಸನ್ಸ್ ವರ್ತಕರು, ಎ.ಪಿ.ಎಂ.ಸಿ. ಯಾರ್ಡ್ ಡಿ ಬ್ಲಾಕ್, ದಾವಣಗೆರೆ ಇವರ ಪುತ್ರಿ

ಮಹಿಳಾ ಮೀಸಲು ಮತ ಕ್ಷೇತ್ರ

ಮಾನ್ಯ ಮತದಾರ ಬಂಧುಗಳೇ,

ದಿನಾಂಕ 22.12.2024ರ ಭಾನುವಾರ 5 ವರ್ಷಗಳ ಅವಧಿಗೆ ನಡೆಯಲಿರುವ ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ 'ಮಹಿಳಾ ಮೀಸಲು ಮತ ಕ್ಷೇತ್ರ' ದಿಂದ ಕ್ರ.ಸಂ. 1 ಉಮಾ ಡಿ.ಹೆಚ್. ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಟಾರ್ಚ್/ಬ್ಯಾಟರಿ ಗುರುತಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲಳನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

ಬ್ಯಾಲೆಟ್ ನಮೂನೆ

| ಕ್ರ.ಸಂ. | ಉಮೇದುವಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ಉಮಾ ಡಿ.ಹೆಚ್. | | |

ನಾವುಗಳು ಸರ್ವ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಿನಾಂಕ : 22.12.2024ರ ಭಾನುವಾರದಂದು ನಡೆಯುವ ಒಂದು ಸ್ಥಾನದ ಅಭ್ಯರ್ಥಿಗೆ ತಮ್ಮ ಅಮೂಲ್ಯ ಮತ ನೀಡುವ ಮೂಲಕ ಇವರನ್ನು ಜಯಶೀಲರನ್ನಾಗಿ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಲು ಕೋರುತ್ತೇವೆ. ಕಾಲಾವಕಾಶದ ಕೊರತೆಯಿಂದಾಗಿ ತಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದ ಕಾರಣ ತಾವುಗಳೆಲ್ಲರೂ ಸದರಿ ದಿನದಂದು ಬಿಡುವು ಮಾಡಿಕೊಂಡು ಮತದಾನ ಮಾಡಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.


ಕೆ.ಜಿ.ಡಿ. ಹಾಲಪ್ಪ


ಕೆ.ಜಿ.ಡಿ. ಪ್ರಭು


ಅಜ್ಜಣ್ಣ ಆರ್.ಕೆ.


ಸಿದ್ದೇಶ್ ಬಿ.ಆರ್.


ಮಹೇಂದ್ರ ಎನ್.ಜಿ. (ಬೂದಿಹಾಳ್)

ಮತದಾನ ದಿನಾಂಕ : 22.12.2024ರ ಭಾನುವಾರ
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00
ಸ್ಥಳ : ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ, ತರಳಬಾಳು ಬಡಾವಣೆ, ದಾವಣಗೆರೆ - 577005

ನಿಮ್ಮ ಮತ ಟಾರ್ಚ್ ಗುರುತಿಗೆ

ತಮ್ಮ ಸೇವಾಕಾಂಕ್ಷಿ,
ಉಮಾ ಡಿ.ಹೆಚ್.
ಕೋಂ ಮಹೇಂದ್ರ ಎನ್.ಜಿ.
ಮೊ. : 94493 74474
80738 35813

ಸೂಚನೆ : ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ...

|| ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು ||



ಮಾನವ ಧರ್ಮಕ್ಕೆ ಜಯವಾಗಲಿ ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ।।

ಸಾಹಿತ್ಯ-ಸಂಸ್ಕೃತಿ ಸಂವರ್ಧಿಸಲಿ ।
ಶಾಂತಿ-ಸಮೃದ್ಧಿ ಸರ್ವರಿಗಾಗಲಿ ।।

ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ
ರಾಜದೇಶೀ ಕೇಂದ್ರ ಶಿವಾಚಾರ್ಯ ಭಗವತ್ಪಾದರ ದಿವ್ಯ ಸಾನ್ನಿಧ್ಯದಲ್ಲಿ

ದಾವಣಗೆರೆ ನಗರ ನಿವಾಸಿಗಳಾದ
ಲಿಂಗೈಕ್ಯ ಶ್ರೀಮತಿ ದೇವರಮನೆ ರತ್ನಮ್ಮ ಮಹಾರುದ್ರಪ್ಪನವರ
ಆತ್ಮಶಾಂತಿ ಮತ್ತು ಸ್ಮರಣಾರ್ಥವಾಗಿ

ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜೆ

ಸ್ವಸ್ತಿಶ್ರೀ ಶಾಲಿವಾಹನ ಶಕೆ 1946ನೇ ಕ್ರೋಧಿನಾಮ ಸಂವತ್ಸರ ಮಾರ್ಗಶಿರ ಮಾಸ
ದಿನಾಂಕ : 21.12.2024, ಶನಿವಾರ

ಬೆಳಿಗ್ಗೆ 9.30 ಗಂಟೆಗೆ
ಇಷ್ಟಲಿಂಗ ಮಹಾಪೂಜೆ

ಮಧ್ಯಾಹ್ನ 1 ಗಂಟೆಗೆ
ಪ್ರಸಾದ ವಿನಿಯೋಗ



ಸ್ಥಳ : ನಂ. 3866/40, 2ನೇ ಮುಖ್ಯರಸ್ತೆ, ಎಸ್.ಎಸ್. ಲೇ ಔಟ್, ಬಿ ಬ್ಲಾಕ್, ದಾವಣಗೆರೆ.

|| ಸ್ವಾಗತ ಕೋರುವವರು ||
ಶ್ರೀ ದೇವರಮನೆ ಮಹಾರುದ್ರಪ್ಪನವರು
ಶ್ರೀಮತಿ ಅನಿತಾ ಶ್ರೀ ದೇವರಮನೆ ಶಿವಕುಮಾರ್
ಶ್ರೀಮತಿ ಕೋಕಿಲ ಶ್ರೀ ದೇವರಮನೆ ಶಿವರಾಜ್
ಶ್ರೀಮತಿ ಸುರೇಖಾ ಶ್ರೀ ದೇವರಮನೆ ಮುರುಗೇಶ್
ಶ್ರೀಮತಿ ಗಂಗಾ ಶ್ರೀ ಶರಣಪ್ಪ ಹಾಲಕೆರೆ ಮತ್ತು ಮೊಮ್ಮಕ್ಕಳು, ಮರಿಮೊಮ್ಮಕ್ಕಳು
• ಚಿ || ಜಯದೇವ ಎಸ್. ದೇವರಮನೆ • ಚಿ || ಬಕ್ಕೇಶ ಎಂ. ದೇವರಮನೆ

# ಅಂಬೇಡ್ಕರ್ ಬಗ್ಗೆ ಅವಹೇಳನ : ಅಮಿತ್ ಷಾ ಕ್ಷಮೆಗೆ ಸಂಸದೆ ಡಾ. ಪ್ರಭಾ ಆಗ್ರಹ



ನವದೆಹಲಿ, ಡಿ.20- ಸಂಸತ್ತಿನಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಕೇಂದ್ರದ ಗೃಹ ಮಂತ್ರಿ ಅಮಿತ್ ಷಾ ಅವರು ದೇಶದ ಜನತೆಯ ಮುಂದೆ ಕ್ಷಮೆ ಯಾಚಿಸಬೇಕು ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಆಗ್ರಹಿಸಿದ್ದಾರೆ.

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಸಂವಿಧಾನದ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಗೃಹ ಮಂತ್ರಿ ಅಮಿತ್ ಷಾ ಅವರು ಇಡೀ ಪ್ರಪಂಚವೇ ಮೆಚ್ಚುವ ನಾಯಕ ಡಾ. ಬಿ.ಆರ್ ಅಂಬೇಡ್ಕರ್ ಅವರ ಬಗ್ಗೆ ಹಗುರವಾಗಿ ಮಾತನಾಡಿ ಇಡೀ ದೇಶದ ಜನತೆಗೆ ತುಂಬಾ ನೋವನ್ನುಂಟು ಮಾಡಿದ್ದಾರೆ ಎಂದು ಹೇಳಿದರು.

ಸಂವಿಧಾನವನ್ನು ರಕ್ಷಣೆ ಮಾಡುತ್ತೇವೆ, ಗೌರವಿಸುತ್ತೇವೆ ಎಂದು ಹೇಳುತ್ತಾ ಬಂದಿರುವ ಅಮಿತ್ ಷಾ ಅವರು, ಅಂಬೇಡ್ಕರ್ ಬದಲು ದೇವರ ಪೂಜೆ ಮಾಡಿದರೆ ಚೆನ್ನಾಗಿತ್ತು ಎಂದು ಹೇಳುವ ಮೂಲಕ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ದೇವರಂತೆ ಪೂಜಿಸುವ ಶೋಷಿತ ಸಮುದಾಯಗಳ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅಭಿಮಾನಿಗಳಿಗೆ ನೋವುಂಟು ಮಾಡಿದ್ದು, ಇಡೀ ಪ್ರಪಂಚದ ಜನತೆಯೇ ಕಣ್ಣಾರೆ ಕಂಡಿದೆ. ಇದನ್ನು ವಿರೋಧಿಸಿ, ಇಂಡಿಯಾ ಒಕ್ಕೂಟದ ನಾವುಗಳು ಸದನದ ಹೊರ ಭಾಗದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಬಳಿ ಪ್ರತಿಭಟನೆ ನಡೆಸುತ್ತಿದ್ದುದನ್ನು ತಡೆಯಲು ಬಿಜೆಪಿ ಹುನ್ನಾರ ನಡೆಸಿತು. ಗಲಾಟೆ, ಗಲಭೆ ಸೃಷ್ಟಿಸಿ ಅಂಬೇಡ್ಕರ್ ಅವರಿಗೆ ಮಾಡಿದ ಅವಹೇಳನ ವಿಷಯವನ್ನು ಮರೆಮಾಚಲು ಮುಂದಾಯಿತು ಎಂದು ಸಂಸದರು ಕಿಡಿಕಾರಿದರು.

ಅದಾನಿ, ಅಂಬಾನಿಗೆ ಮಾತ್ರ ಗುತ್ತಿಗೆ ನೀಡುವ ಕೇಂದ್ರದ ಬಿಜೆಪಿ ಸರ್ಕಾರಕ್ಕೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಗೃಹ ಮಂತ್ರಿ ಅಮಿತ್ ಷಾ ಅವರಿಗೆ ಅಂಬೇಡ್ಕರ್ ಅವರ ಸಂವಿಧಾನದ ಬಗ್ಗೆ ಕಿಂಚಿತ್ತು ಗೌರವಿಲ್ಲ. ಅಂಬೇಡ್ಕರ್ ಅವರು ಈ ದೇಶದ ದಲಿತ ದಮನಿತರ ಅಲ್ಪ ಸಂಖ್ಯಾತರ ದೊಡ್ಡ ಶಕ್ತಿ. ಅಲ್ಲದೇ ವಿಶ್ವಕ್ಕೆ ಡಾ.ಬಿಆರ್ ಅಂಬೇಡ್ಕರ್ ಅವರ ಕೊಡುಗೆ ಅಪಾರವಾದುದ್ದು ಎಂದು ತಿಳಿಸಿರುವ ಸಂಸದರು, ಅಂಬೇಡ್ಕರ್ ಅವರಿಗೆ ಮಾಡಿದ ಅಪಮಾನದಿಂದ ದಲಿತರು, ಹಿಂದುಳಿದ ವರ್ಗದವರು, ಇಡೀ ದೇಶವೇ ಬಿಜೆಪಿ ಸರ್ಕಾರದ ವಿರುದ್ದ ಹೋರಾಟ ಮಾಡಬೇಕಿದೆ ಎಂದು ಕರೆ ನೀಡಿದರು. ಈ ಕೂಡಲೇ ಕೇಂದ್ರದ ಗೃಹ ಮಂತ್ರಿಗಳು ಇಡೀ ದೇಶದ ಜನತೆಯ ಮುಂದೆ ಕ್ಷಮೆ ಕೇಳಬೇಕೆಂದು ಸಂಸದರು ಆಗ್ರಹಿಸಿದರು.

## ವಾದಕ್ಕೆ ಕೋರ್ಟ್ ಪುರಸ್ಕಾರ

**(1ನೇ ಪುಟದಿಂದ)** ಆಕ್ಷೇಪಾರ್ಹ ಮಾತುಗಳನ್ನು ಬಳಸಿದ್ದಾರೆ ಎಂದು ಆರೋಪಿಸಲಾಗಿತ್ತು. ಸದನದ ಕಲಾಪ ಸ್ವಲ್ಪ ಕಾಲ ಮುಂದೂಡಿದ ಸಂದರ್ಭದಲ್ಲಿ ಚಕಮಕಿ ನಡೆಯುವಾಗ, ರವಿ ಈ ಮಾತುಗಳನ್ನು ಆಡಿದ್ದಾರೆ ಎಂದು ಪೊಲೀಸರಲ್ಲಿ ದೂರಲಾಗಿತ್ತು.

ರವಿ ಅವರನ್ನು ಗುರುವಾರ ಸಂಜೆ ಬಂಧಿಸಿ ಪೊಲೀಸ್ ವಾಹನದಲ್ಲಿ ಸುವರ್ಣ ವಿಧಾನಸೌದದಿಂದ ಕರೆದೊಯ್ಯಲಾಗಿತ್ತು.

ಹೆಬ್ಬಾಳ್ಕರ್ ನೀಡಿದ ದೂರಿನ ಆಧಾರದ ಮೇಲೆ ರವಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್75 (ಲೈಂಗಿಕ ಪೀಡನೆ) ಹಾಗೂ 79 (ಮಹಿಳೆ ವಿರುದ್ಧ ಅವಮಾನಕರವಾದ ಮಾತು, ಸಂಕೇತ ಇಲ್ಲವೇ ಕೃತ್ಯ ಎಸಗುವುದು) ಅನ್ವಯ ಪ್ರಕರಣ ದಾಖಲಿಸಲಾಗಿತ್ತು. ಈ ಬಗ್ಗೆ ರವಿ ಪರವಾಗಿ ಹೈಕೋರ್ಟ್‌ನಲ್ಲಿ ಹಾಜರಿದ್ದ ವಕೀಲ ಸಿದ್ದಾರ್ಥ ಸುಮನ್, ಬಂಧನ ಅಕ್ರಮ ಎಂಬ ಕಾರಣಕ್ಕಾಗಿ ಈ ಕ್ರಮಗಳನ್ನು ಪ್ರಶ್ನಿಸಲಾಗುತ್ತಿದೆ ಎಂದರು.

ಇದು ಜಾಮೀನು ಅರ್ಜಿ ಅಲ್ಲ, ಇದು ಎಫ್‌ಐಆರ್ ರದ್ದುಗೊಳಿಸುವ ಅರ್ಜಿ ಅಲ್ಲ. ಕಾನೂನು ಪ್ರಕಾರ ಬಂಧನ ಪಡೆದಿಲ್ಲ ಎಂದು ಅರ್ಜಿ ಸಲ್ಲಿಸುತ್ತಿದ್ದೇವೆ. ಬಂಧನಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಹೈಕೋರ್ಟ್ ನೀಡಿದ ಯಾವುದೇ ಮಾರ್ಗಸೂಚಿಗಳನ್ನು ಪಾಲಿಸಿಲ್ಲ ಎಂದು ಹೇಳಿದರು.

ರವಿ ಗಾಯಗೊಂಡಿದ್ದಾರೆ, ಈ ಕುರಿತ ಚಿತ್ರಗಳನ್ನು ಹಾಜರುಪಡಿಸಲಾಗಿದೆ. ಈ ಗಾಯಗಳು ಹೇಗಾಗಿದೆ ಎಂಬುದನ್ನು ಸರ್ಕಾರ ತಿಳಿಸಿಲ್ಲ. ಯಾವಾಗ ಗಾಯಗಳಾಗಿವೆ ಎಂಬುದನ್ನು ತಿಳಿಸಿಲ್ಲ. ಅವರ ತಲೆಯ ಸಿ.ಟಿ. ಸ್ಕ್ಯಾನ್ ನಡೆಸಬೇಕು ಎಂದು ವೈದ್ಯಕೀಯ ವರದಿಯಲ್ಲಿ ತಿಳಿಸಲಾಗಿದೆ. ಇದಾವುದು ಸಮರ್ಥನೀಯವಲ್ಲ ಎಂದು ಸುಮನ್ ಹೇಳಿದರು.

ಸೆಕ್ಷನ್ 75 ಹಾಗೂ 79ರ ಅಡಿಯಲ್ಲಿ ಗರಿಷ್ಠ ಮೂರು ವರ್ಷ ಹಾಗೂ ಒಂದು ವರ್ಷ ಜೈಲು ಶಿಕ್ಷೆ ಇದೆ. ಈ ರೀತಿಯ ಪ್ರಕರಣಗಳಲ್ಲಿ ಬಂಧನದ ಅಗತ್ಯವೇನಿದೆ? ಎಂದು ವಕೀಲರು ಪ್ರಶ್ನಿಸಿದರು. ವಾದಗಳನ್ನು ಆಲಿಸಿದ ನಂತರ, ರವಿ ಅವರನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ನ್ಯಾಯಾಲಯ ಆದೇಶಿಸಿದೆ.

## ನಗರದಲ್ಲಿ ಇಂದು 'ಗುರುದೇವರೊಂದಿಗೆ ಧ್ಯಾನ' ಕಾರ್ಯಕ್ರಮ

ಆರ್ಟ್ ಆಫ್ ಲಿವಿಂಗ್ ವತಿಯಿಂದ ದಾವಣಗೆರೆ ಡಾ. ಸದ್ಯೋಜಾತ ಸ್ವಾಮೀಜಿಯವರ ಹಿರೇಮಠದ 1 ನೇ ಮಹಡಿಯಲ್ಲಿ ಇಂದು ಸಂಜೆ 7 ರಿಂದ 8 ರವರೆಗೆ ಗುರುಪೂಜೆ ಮತ್ತು ಸತ್ಸಂಗ ನಡೆಯಲಿದೆ.

ಸಂಜೆ 8 ಕ್ಕೆ ವಿಶ್ವದ 160 ದೇಶಗಳಲ್ಲಿ ಪ್ರಸಾರವಾಗುವ ಗುರುದೇವರೊಂದಿಗೆ ವಿಶ್ವ ಧ್ಯಾನದ ನೇರ ಪ್ರಸಾರ ಕಾರ್ಯಕ್ರಮ ನಡೆಯಲಿದೆ. ವಿವರಗಳಿಗೆ 9886736836, 7760155659 ಗೆ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಬೆಸ್ಕಾಂ ಸಭೆ

ಉಪ ವಿಭಾಗ-1ರ ವತಿಯಿಂದ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ಗ್ರಾಹಕರ ಸಂವಾದ ನಡೆಯಲಿದ್ದು, ಗ್ರಾಹಕರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು.

# ಸಿ.ಟಿ. ರವಿ ದಾವಣಗೆರೆಯಲ್ಲಿ ಬಂಧ ಮುಕ್ತ



**ವಿಧಾನ ಪರಿಷತ್ ನಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿದ ಆರೋಪದಲ್ಲಿ ಬಂಧನಕ್ಕೊಳಗಾಗಿದ್ದ, ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಹೈಕೋರ್ಟ್ ಆದೇಶದ ಬಳಿಕ ಶುಕ್ರವಾರ ರಾತ್ರಿ ದಾವಣಗೆರೆಯಲ್ಲಿ ಪೊಲೀಸರು ಬಿಡುಗಡೆ ಮಾಡಿದರು.**

**(1ನೇ ಪುಟದಿಂದ)** ಕಾರ್ಯಕರ್ತರು ನನ್ನ ಜತೆಗೆ ನಿಂತು ಆತ್ಮಸ್ಥೈರ್ಯ ನೀಡಿದ್ದಾರೆ ಎಂದು ಹೇಳಿದರು.

**ಸರ್ಕಾರಕ್ಕೆ ಕಪಾಳ ಮೋಕ್ಷ:** ಸಿ.ಟಿ. ರವಿ ಅವರಿಗೆ ಮಧ್ಯಂತರ ಜಾಮೀನು ನೀಡಿ ರಾಜ್ಯ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದ್ದು, ಇದನ್ನು ಬಿಜೆಪಿ ಸ್ವಾಗತಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಹೇಳಿದರು.

ನೋಟಿಸ್ ನೀಡದೆ ಬಂಧನ ಮಾಡಿದ್ದು ಕಾನೂನುಬಾಹಿರ. ನ್ಯಾಯಾಲಯದ ಈ ಆದೇಶ ಕಾಂಗ್ರೆಸ್ ಸರ್ಕಾರಕ್ಕೆ ಕಪಾಳ ಮೋಕ್ಷ ಮಾಡಿದಂತಾಗಿದೆ ಎಂದರು.

ಕಾಂಗ್ರೆಸ್ ಪುಢಾರಿಗಳು ಸುವರ್ಣಸೌಧದ ಒಳಗೆ ನುಗ್ಗಿ ಸಿ.ಟಿ.ರವಿ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದರು. ನಂತರ ಎಫ್‌ಐಆರ್ ಮಾಡಿ, ನೋಟಿಸ್ ನೀಡದೆ ರವಿ ಅವರನ್ನು ಕಾನೂನು ಬಾಹಿರವಾಗಿ ಬಂಧಿಸಿದರು. ಖಾನಾಪುರ ಠಾಣೆಗೆ ಕರೆದೊಯ್ದು, ರಾತ್ರಿ ಪೊಲೀಸ್ ಠಾಣೆಯಲ್ಲೇ ಸಿ.ಟಿ.ರವಿ ಅವರ ಮೇಲೆ ಹಲ್ಲೆ ಮಾಡಲಾಗಿದೆ. ತಲೆಗೆ ಪೆಟ್ಟು ಬಿದ್ದು ರಕ್ತ ಸುರಿಯುತ್ತಿದ್ದರೂ ಲೆಕ್ಕಿಸದೆ, ಆಸ್ಪತ್ರೆಗೆ ಕರೆದೊಯ್ಯದೆ, ರಾತ್ರಿ 12 ಗಂಟೆಗೆ ಬೆಂಗಳೂರಿನತ್ತ ಕರೆದೊಯ್ಯುವುದಾಗಿ ಹೇಳಿ, ಮೂರ್ನಾಲ್ಕು ಜಿಲ್ಲೆ ಸುತ್ತಿರಿಸಿ, ಭಯ ಹುಟ್ಟಿಸುವ ರೀತಿ ವರ್ತಿಸಿದ್ದಾರೆ. ಈ ವೇಳೆ ಪೊಲೀಸರಿಗೆ ಮೇಲಾಧಿಕಾರಿಗಳು, ಸಚಿವರಿಂದ ಅರ್ಧ ಗಂಟೆಗೊಮ್ಮೆ ಕರೆ ಬರುತ್ತಿತ್ತು. ಮುಖ್ಯಮಂತ್ರಿಗಳಿಂದಲೂ ಕರೆ ಬಂದಿರಬಹುದು ಎಂದರು.

ಈ ಘಟನೆ ಕರ್ನಾಟಕದ ರಾಜಕೀಯ ಮಾತ್ರವಲ್ಲ, ದೇಶದ ರಾಜಕಾರಣದಲ್ಲಿ ನಡೆದಿಲ್ಲ. ಕಾಂಗ್ರೆಸ್ ಸರ್ಕಾರವು ಹಿಟ್ಲರ್ ಧೋರಣೆಯನ್ನು ಪ್ರದರ್ಶಿಸಿದೆ. ಬಿಜೆಪಿ ಕಾರ್ಯಕರ್ತರೇನು ಬಳೆ ತೊಟ್ಟು ಕುಳಿತಿಲ್ಲ. ಚರ್ಚೆ ಮಾಡುತ್ತೇವೆ, ತಾರ್ಕಿಕ ಅಂತ್ಯದ ವರೆಗೆ ಹೋರಾಟ ಮಾಡುತ್ತೇವೆ. ನಾವೆಲ್ಲರೂ ಒಟ್ಟಾಗಿ ಮುಂದಿನ ಹೆಜ್ಜೆಯ ಕುರಿತು ತೀರ್ಮಾನ ಮಾಡುತ್ತೇವೆ ಎಂದರು.

**ಮಾನವ ಹಕ್ಕು ಆಯೋಗಕ್ಕೆ ದೂರು:** ಸಿ.ಟಿ. ರವಿ ಮೇಲೆ ಹಲ್ಲೆ ನಡೆಸಿದ ಪೊಲೀಸ್ ಅಕಾರಿಗಳ ವಿರುದ್ಧ ಕೇಂದ್ರ ಮಾನವ ಹಕ್ಕು ಆಯೋಗಕ್ಕೆ ದೂರು ನೀಡುತ್ತೇವೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಹೇಳಿದರು.

ಸಿ.ಟಿ.ರವಿ ಅವಾಚ್ಯವಾಗಿ ಮಾತನಾಡಿರುವುದು ನಿಜ ಎಂದು ಸಾಬೀತಾಗಬೇಕು. ಸಭಾಧ್ಯಕ್ಷರು ದೂರು ದಾಖಲಿಸಬೇಕು, ಬಳಿಕ ಕೋರ್ಟಿಗೆ ಹೋಗುತ್ತದೆ, ನ್ಯಾಯಾಧೀಶರು ಆದೇಶ ನೀಡಿದರೆ ಪಾಲನೆ ಮಾಡುತ್ತೇವೆ. ಆದರೆ, 'ಶಿಕ್ಷೆ ಕೊಡಲು ಡಿಕೆಶಿ, ಸಿದ್ದರಾಮಯ್ಯ ಯಾರು? ಅವರು ನ್ಯಾಯಾಧೀಶರಾ? ಕೊಲೆ ಮಾಡಲು 40 ಜನ ಬಂದಿದ್ದರು, ಶವವನ್ನು ಚಿಕ್ಕಮಗಳೂರಿಗೆ ಪಾರ್ಸಲ್ ಮಾಡುತ್ತೇವೆ ಎಂದು ಹೇಳುತ್ತಾರೆ. ಇದು ಗೂಂಡಾಗಿರಿ ಅಲ್ಲವೇ ಎಂದು ಅಶೋಕ್ ಪ್ರಶ್ನಿಸಿದರು.

ಪೊಲೀಸರು ರವಿ ಅವರನ್ನು ಕಾಡಿನ ಒಳಗೆ, ಕ್ರಶರ್ ಬಳಿ ಕರೆದುಕೊಂಡು ಹೋಗಿ ಬೆದರಿಕೆ ಹಾಕಿ, ಮಾನಸಿಕವಾಗಿ ಕುಗ್ಗಿಸಿದ್ದಾರೆ. ಹಿಂದೂ ಪರ ಧ್ವನಿ ಎತ್ತುವ ಸಿ.ಟಿ.ರವಿ ಅವರನ್ನು ಬಗ್ಗು ಬಡಿಯಲು ಸರಕಾರ ಹುನ್ನಾರ ನಡೆಸಿದೆ. ತನಿಕಾಕಾರಿ ಮೇಲೆ ಕಮೀಷನರ್ ಒತ್ತಡ ಹಾಕಿದ್ದಾರೆ ಎಂದು ದೂರಿದರು.

ಕೋರ್ಟ್ ಛೀಮಾರಿ ಹಾಕಿದೆ. ಬೇರೆ ಯಾರಾದರೂ ಆಗಿದ್ದರೆ ರಾಜೀನಾಮೆ ನೀಡುತ್ತಿದ್ದರು. ಈ ಘಟನೆ, ದೌರ್ಜನ್ಯ ಸರಕಾರಕ್ಕೆ ಕಪ್ಪುಚುಕ್ಕೆ, ಎಲ್ಲಿದ್ದಾರೋ ಅಲ್ಲೇ ಬಿಡುಗಡೆ ಮಾಡಬೇಕು ಎಂದು ಕೋರ್ಟ್ ಆದೇಶಿಸಿದೆ. ಸಿ.ಟಿ.ರವಿ ಒಬ್ಬಂಟಿ ಅಲ್ಲ ಎಂಬುದನ್ನು ಕಳೆದ ಎರಡು ದಿನಗಳಿಂದ ನಾವು ತೋರಿಸಿದ್ದೇವೆ. ನಮ್ಮದು ರಾಷ್ಟ್ರೀಯ ಪಕ್ಷ, ಕೇಡರ್ ಪಕ್ಷ, ಕಾಂಗ್ರೆಸ್ ರೀತಿ ಅಬ್ಬೇಪಾರಿ ಪಕ್ಷವಲ್ಲ ಎಂದು ಕಿಡಿಕಾರಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಎಸ್.ಎ. ರವೀಂದ್ರನಾಥ್, ಹರಿಹರ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಬಸವರಾಜ ನಾಯ್ಕ, ಎಸ್.ವಿ. ರಾಮಚಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್ ಇತರರು ಈ ಸಂದರ್ಭದಲ್ಲಿದ್ದರು.

## ನಗರದ ಸವಿತಾ ಸಮಾಜದಲ್ಲಿ ಇಂದು ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ




ಕೊಂಡಜ್ಜಿ ರಸ್ತೆಯಲ್ಲಿರುವ ಸವಿತಾ ಸಮಾಜದ ಮಾರುತಿ ಮಂದಿರದಲ್ಲಿ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವವನ್ನು ಇಂದು ರಾತ್ರಿ 7.30 ಘಂಟೆಗೆ ನಡೆಸಲಾಗುವುದು.

## ಬಿಳಿಚೋಡು : ಇಂದು ವಿದ್ಯುತ್ ವ್ಯತ್ಯಯ

ಬಿಳಿಚೋಡು ಹಾಗೂ ಸೊಕ್ಕೆ ವಿ.ವಿ. ಕೇಂದ್ರದ 220 ಕೆ.ವಿ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ 66/11 ಕೆವಿ ವಿ.ವಿ. ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎನ್.ಜೆ.ವೈ, ಐ.ಪಿ ಮಾರ್ಗಗಳಿಗೆ ಇಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಕೊಕ್ಕನೂರಿನಲ್ಲಿ ಇಂದು ಹನುಮಪ್ಪನ ಕಾರ್ತಿಕೋತ್ಸವ



ಮಲೇಬೆನ್ನೂರು ಸಮೀಪದ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿ ದೇವರ ಕಡೇ ಕಾರ್ತಿಕ ಮಹೋತ್ಸವ ಮತ್ತು ಸ್ವಾಮಿಯ ಆಷ್ಪೋತ್ಸವವು ಇಂದು ಸಂಜೆ 6 ರಿಂದ ಜರುಗಲಿದೆ. ಇಡೀ ದಿನ ಕಲ್ಯಾಣ ಮಂಟಪದಲ್ಲಿ ಮಹಾದಾಸೋಹ ಏರ್ಪಡಿಸಲಾಗಿದೆ.

## ನಗರದ ಐರಣಿ ಶಾಖಾ ಮಠದಲ್ಲಿ ಇಂದು ಕಾರ್ತಿಕೋತ್ಸವ



ನಗರದ ಶಿವಾಜಿನಗರದ ಬಳಿಯ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಬಳಿ ಇರುವ ರಾಣೇಬೆನ್ನೂರು ತಾಲ್ಲೂಕಿನ ಐರಣಿ ಹೊಳೆ ಮಠದ ಶಾಖಾ ಮಠದಲ್ಲಿ ಇಂದು ಸಂಜೆ 7.30ಕ್ಕೆ ಕಡೇ ಕಾರ್ತಿಕೋತ್ಸವ ನಡೆಯಲಿದೆ ಎಂದು ಶಾಖಾ ಮಠದ ಜೋಗಪ್ಪರ ಶಿವಾನಂದ್ ತಿಳಿಸಿದ್ದಾರೆ.

ಐರಣಿ ಹೊಳೆಮಠದ ಶ್ರೀ ಬಸವರಾಜ ದೇಶೀಕೇಂದ್ರ ಸ್ವಾಮೀಜಿ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

## ಸಿ.ಟಿ.ರವಿ ವರ್ತನೆ ಬಗ್ಗೆ ಲಕ್ಷ್ಮಿ ಕಿಡಿ

**(1ನೇ ಪುಟದಿಂದ)** ರಾಜಕಾರಣಕ್ಕೆ ಬಂದಿದ್ದಾರೆ.

ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ಡ್ರಗ್ಗಿಸ್ಟ್ ಎಂದು ಪದೇ ಪದೇ ರವಿ ಅವರು ಹೇಳುತ್ತಿದ್ದಾಗ, ನೀವೊಬ್ಬ ಕೊಲೆಗಾರ ಎಂದು ಹೇಳಿದ್ದು ನಿಜ.

ಈ ಸಂದರ್ಭದಲ್ಲಿ ನನ್ನ ವಿರುದ್ಧ ಹೇಯ ಪದವನ್ನು ಬಳಸಿದ್ದಾರೆ, ನಾನು ಇಂತಹದ್ದಕ್ಕೆಲ್ಲಾ ಹೆದರುವುದಿಲ್ಲ, ಮಾತಿನ ಮನೆಯಲ್ಲಿ ಇಂತಹ ಘಟನೆ ನಡೆದಿದ್ದು ನನಗೆ ಬೇಸರ ತಂದಿದೆ ಎಂದರು.


## ಎಚ್ಚರಿಕೆ ನೀಡಿದ ಸಹೋದರ

**(1ನೇ ಪುಟದಿಂದ)** ಕ್ಷೇತ್ರದ ಜನರ ಫೋನ್ ಎತ್ತಿ ಸಮಸ್ಯೆಗಳಿಗೆ ಸ್ಪಂದಿಸುವುದನ್ನು ಕಲಿಯಿರಿ. ಅದನ್ನು ಬಿಟ್ಟು 4 ದಿನ ಬೆಂಗಳೂರು, 2 ದಿನ ಟ್ರಿಪ್ ಅಂತಾ ಓಡಾಡುವುದನ್ನು ನಿಲ್ಲಿಸಿ, 24x7 ಕ್ಷೇತ್ರದ ಜನರ ಜೊತೆ ಇರುವುದನ್ನು ಕಲಿಯಿರಿ.

ಸಚಿವರ ಜೊತೆ ಮುಕ್ತವಾಗಿ ಮಾತನಾಡಿ, ಕ್ಷೇತ್ರದ ಅಭಿವೃದ್ಧಿ ಕಡೆ ಗಮನ ಹರಿಸಿ, ಚುನಾವಣೆಯ ಸಮಯದಲ್ಲಿ ಕ್ಷೇತ್ರದ ಜನರಿಗೆ ನೀಡಿದ ಮಾತನ್ನು ಉಳಿಸಿಕೊಳ್ಳಿ. ಅದನ್ನು ಬಿಟ್ಟು ಸಚಿವರಾದ ಮಲ್ಲಣ್ಣನವರ ಬಗ್ಗೆ ಹಗುರುವಾಗಿ ಮಾತನಾಡಿದರೆ ನಾನು ಸಹಿಸುವುದಿಲ್ಲ ಎಂದು ಶಿವಗಂಗಾ ಶ್ರೀನಿವಾಸ್ ಅವರು ಬಸವರಾಜ್ ಅವರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಶಿವಗಂಗಾ ಬಸವರಾಜ್ ಅವರೇ, ನೀವು ರಾಜಕೀಯಕ್ಕೆ ಎಂಟ್ರಿ ಕೊಡಲಿಕ್ಕೆ ನಾನು ಕಾರಣ ಎನ್ನುವುದನ್ನು ಮರೆಯಬೇಡಿ. ಈ ಹಿಂದೆ ಮಹಾನಗರ ಪಾಲಿಕೆ ಚುನಾವಣೆಗೆ ಟಿಕೆಟ್ ತಂದವರು ಯಾರು ? ನಾನು ಇದೇ ನಮ್ಮ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಅಂಗಲಾಚಿ ನಿಮಗೆ ಟಿಕೆಟ್ ಕೊಡಿಸಿದ್ದೆ. ನಿಮ್ಮ ಗೆಲುವಿಗೆ ಸಚಿವರು ಹಾಗು ನಾನು ಕೂಡಾ ಶ್ರಮ ಪಟ್ಟಿದ್ದೇನೆ. ಇದನ್ನೆಲ್ಲಾ ತಾವು ಮರೆತು ಶಾಸಕರಾದ ನಂತರ ಉಸ್ತುವಾರಿ ಸಚಿವರ ಬಗ್ಗೆ ಹಗುರುವಾಗಿ ಮಾತನಾಡುತ್ತಿದ್ದೀರಿ. ಈ ಹಿಂದೆಯೂ ನೀವು ಸಚಿವ ಮಲ್ಲಿಕಾರ್ಜುನ್ ಬಗ್ಗೆ ಹಗರುವಾಗಿ ಮಾತನಾಡಿದ್ದಿರಿ. ಆಗಲೇ ನಾನು ನಿಮಗೆ ಎಚ್ಚರಿಕೆ ಮಾತುಗಳನ್ನು ಹೇಳಿದ್ದೆ. ಸಚಿವ ಮಲ್ಲಿಕಾರ್ಜುನ್ ಅವರು ನಿಮ್ಮ ತಪ್ಪನ್ನು ಕ್ಷಮಿಸಿದ್ದರು. ಆದರೆ, ನೀವು ಯಾರದ್ದೋ ಕುಮ್ಮಕ್ಕಿನಿಂದ ಪದೇ ಪದೇ ಸಚಿವರ ವಿರುದ್ಧ ಮಾತನಾಡಿ, ನಮ್ಮ ಅವರ ನಡುವಿನ ಸಹೋದರ ಬಾಂಧವ್ಯಕ್ಕೆ ಧಕ್ಕೆ ತರುವ ಕೆಲಸ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಇನ್ನು ಮುಂದೆಯಾದರೂ ತಮ್ಮ ವರ್ತನೆಯನ್ನು ಬದಲಿಸಿಕೊಂಡು ಕ್ಷೇತ್ರದ ಅಭಿವೃದ್ಧಿಯತ್ತ ಗಮನ ಹರಿಸಿ ಎಂದು ಶ್ರೀನಿವಾಸ್ ಕಿವಿಮಾತು ಹೇಳಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 20.12.2024ರಂದು ನಿಧನರಾದ ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿ ನಿರ್ದೇಶಕರಾಗಿದ್ದ

**ವಿದ್ಯಾಧರ ಎಂ. ಅನ್ವೇಕರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ
ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ದುಃಖ ಭರಿಸುವ ಶಕ್ತಿಯನ್ನು ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು**
**ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿ (ರಿ)**
ಪಿ.ಬಿ. ರಸ್ತೆ, ದಾವಣಗೆರೆ.

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಗುರು-ಲಿಂಗ ಜಂಗಮಾರಾಧನೆ ಆಹ್ವಾನ**



ದಾವಣಗೆರೆ, ಶಿವಕುಮಾರಸ್ವಾಮಿ ಬಡಾವಣೆ ವಾಸಿ
**ಶ್ರೀ ಜೆ.ಎಸ್. ವಿಜಯ್ ಮತ್ತು ಸಹೋದರ, ಸಹೋದರಿಯರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 17.12.2024ನೇ ಮಂಗಳವಾರ ಸಂಜೆ 05.45ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಜೆ.ಎಸ್. ಭಾಗ್ಯಮ್ಮನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಗುರು-ಲಿಂಗ ಜಂಗಮಾರಾಧನೆ"ಯನ್ನು
ದಿನಾಂಕ : 21.12.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ದಾವಣಗೆರೆ ನಗರ ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಮೃತರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಫೋ. : 94485 33928, 94830 93888

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಭಾವಪೂರ್ಣ ಶ್ರದ್ಧಾಂಜಲಿ**




ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷರೂ, ಪೊಲೀಸ್ ಇಲಾಖೆಯ ನಿವೃತ್ತ ಅಧಿಕಾರಿಗಳೂ, ಸಮಾಜದ ಹಿರಿಯರೂ ಆದ
**ಶ್ರೀ ಎಸ್.ಬಿ. ಹಲಗೇರಿ**
ಅವರು ದಿನಾಂಕ 20.12.2024ರಂದು ಸ್ವರ್ಗಸ್ಥರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಡಾ. ಪ್ರಭಾ ಮಲ್ಲಿಕಾರ್ಜುನ್** ಲೋಕಸಭಾ ಸದಸ್ಯರು
**ಆರ್.ಜಿ. ನಾಗೇಂದ್ರ ಪ್ರಕಾಶ್** ಗೌರವಾಧ್ಯಕ್ಷರು
**ಪ್ರಕಾಶ್ ಪಾಟೀಲ್** ಅಧ್ಯಕ್ಷರು
**ತಾತಾ ವೆಂಕಟಾಚಲಪತಿ ಶೆಟ್ಟಿ** ಉಪಾಧ್ಯಕ್ಷರು
**ವಿ. ವೀರಭದ್ರರಾವ್** ಕಾರ್ಯದರ್ಶಿ
**ನಾಗಭೂಷಣ್ ಕಡೆಕೊಪ್ಪ** ಖಜಾಂಚಿ

ಹಾಗೂ ಎಲ್ಲಾ ನಿರ್ದೇಶಕರು, ವಿಶೇಷ ಆಹ್ವಾನಿತರು ಮತ್ತು ಭಕ್ತ ವೃಂದ
**ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ಸಮಿತಿ**
ಶ್ರೀ ಡಿ. ದೇವರಾಜ ಅರಸು ಬಡಾವಣೆ, ಎ. ಬ್ಲಾಕ್, ದಾವಣಗೆರೆ.




**7ನೇ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ಸುಮಿತ್ರಮ್ಮ ಅಮರೇಶಪ್ಪ**
ನಿಧನ : 21.12.2017
ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:
ಪತಿ : ಅಮರೇಶಪ್ಪ ಮೈಲೇಶ್ವರ
ಮಕ್ಕಳಾದ : ♦ ಶ್ರೀಮತಿ ನಿರ್ಮಲ ಎ. ರಮೇಶ್ ♦ ಶ್ರೀಮತಿ ಸವಿತ ಎ. ಬಸವರಾಜ್ ♦ ಶ್ರೀಮತಿ ವಾಣಿಶ್ರೀ ಎ. ಆನಂದ್ ♦ ಶ್ರೀಮತಿ ಕವಿತ ಷಣ್ಮುಖಪ್ಪ
ಮತ್ತು ಮೊಮ್ಮಕ್ಕಳು ಹಾಗೂ ಬಂಧುಗಳು, ಮೊ. : 94482 48080, 98862 28382

# ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದಿಂದ ದಿನದರ್ಶಿಕೆ



ದಾವಣಗೆರೆ, ಡಿ. 20- ನಗರದ ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದಿಂದ ಪ್ರಥಮ ಬಾರಿಗೆ 2025 ನೇ ಸಾಲಿನ ದಿನದರ್ಶಿಕೆಯನ್ನು ಬ್ರಹ್ಮಚೈತನ್ಯ ಮಂದಿರದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ. ಪಿ.ಎಸ್ . ಸುರೇಶ್ ಬಾಬು, ಕಾರ್ಯದರ್ಶಿ ಸುಬ್ರಮಣ್ಯ ಎಲ್.ವಿ., ಸಮಾಜದ ಹಿರಿಯ ರಾಮರಾವ್ ಬಿಡುಗಡೆಗೊಳಿಸಿದರು.

# ಇಂದು ನಂದಿಗಾವಿ ಶ್ರೀನಿವಾಸ ಹುಟ್ಟುಹಬ್ಬ



ಹರಿಹರ, ಡಿ. 20 - ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಹರಿಹರ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಅವರ ಹುಟ್ಟುಹಬ್ಬ ಹಾಗೂ ಅಭಿನಂದನಾ ಸಮಾರಂಭವನ್ನು ನಾಳೆ ದಿನಾಂಕ 21 ರ ಶನಿವಾರ ಇಲ್ಲಿನ ರಾಘವೇಂದ್ರ ಸ್ವಾಮಿ ಮಠದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದ ಅಧ್ಯಕ್ಷ ಕೆ.ಬಿ. ರಾಜಶೇಖರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕಾರ್ ಮಾತನಾಡಿ, ಈ ಕಾರ್ಯಕ್ರಮಕ್ಕೆ ಮಠಾಧೀಶರು, ಚರ್ಚ್ ಪಾದ್ರಿಗಳು ಹಾಗೂ ಶಂಶುದ್ದೀನ್ ಮೌಲಾನಾ, ಸಚಿವ ಸತೀಶ್ ಜಾರಕಿಹೊಳಿ, ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್ ಎಸ್ ಮಲ್ಲಿಕಾರ್ಜುನ್, ಸಂಸದೆ ಡಾ, ಪ್ರಭಾ ಮಲ್ಲಿಕಾರ್ಜುನ್, ಶಾಸಕರುಗಳಾದ ಬಸವಂತಪ್ಪ, ಶಿವಗಂಗಾ ಬಸವರಾಜ್, ದೇವೇಂದ್ರಪ್ಪ, ಡಿ.ಜಿ.ಶಾಂತನಗೌಡ್ರು, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಮಾಜಿ ಶಾಸಕ ಎಸ್. ರಾಮಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್, ದೂಡ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಹರಿಹರ ತಾಲ್ಲೂಕು ಕಾಂಗ್ರೆಸ್ ಉಸ್ತುವಾರಿ ವಿಜಯಕುಮಾರ್ ಸೇರಿದಂತೆ, ಹಲವು ಕಾಂಗ್ರೆಸ್ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ನಗರಸಭೆ ಸದಸ್ಯ ಅಬ್ದುಲ್ ಅಲಿಂ ಮಾತನಾಡಿದರು.

ಈ ಸಂದರ್ಭದಲ್ಲಿ ಮುಖಂಡ ರೇವಣಸಿದ್ದಪ್ಪ ಅಮರಾವತಿ, ಬಾಬುಲಾಲ್, ದಾದಾಪೀರ್ ಭಾನುವಳ್ಳಿ, ನಗರಸಭೆ ನಾಮ ನಿರ್ದೇಶನ ಸದಸ್ಯ ಸಂತೋಷ ದೊಡ್ಡಮನಿ, ಜಾಕೀರ್, ಆಶ್ರಯ ಸಮಿತಿ ಸದಸ್ಯೆ ಭಾಗ್ಯಮ್ಮ, ಕೆಡಿಪಿ ಸದಸ್ಯ ಗೋವಿನಾಳ ರಾಜಣ್ಣ, ಮಲ್ಲೇಶ್ ಕಮಲಾಪುರ, ಸಂತೋಷ ನೋಟದರ್, ದೇವರ ಬೆಳಕೇರಿ ಮಹೇಶ್ವರಪ್ಪ, ಸೇವಾದಳದ ಜಿ.ವಿ. ಪ್ರವೀಣ್, ಅಭಿದಾಲಿ, ಚಂದ್ರಪ್ಪ, ಮಂಜುನಾಥ್, ಗಣೇಶ ನಲ್ಲಿ, ಪುಷ್ಪಾ ಮಲೇಬೆನ್ನೂರು, ಐರಣಿಯಮ್ಮ, ನಜೀರ್, ಬಾವಿಕಟ್ಟಿ ಕರಿಬಸಪ್ಪ ಹಾಗೂ ಇತರರು ಹಾಜರಿದ್ದರು.

# ನಾಳಿನ ಜಿಲ್ಲಾ ಕುರುಬರ ಸಂಘದ ಸಭೆ ಮುಂದೂಡಿಕೆ

ದಾವಣಗೆರೆ, ಡಿ.20- ನಾಳೆ ದಿನಾಂಕ 22ರ ಭಾನುವಾರ ಬೆಳಿಗ್ಗೆ 11 ಕ್ಕೆ ನಗರದ ಶ್ರೀ ಬೀರೇಶ್ವರ ಹಾಸ್ಟೆಲ್‌ನಲ್ಲಿ ಬಿ.ಹೆಚ್. ಪರಶುರಾಮಪ್ಪ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಜಿಲ್ಲಾ ಕುರುಬರ ಸಂಘದ ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಲೋಕಿಕೆರೆ ಸಿದ್ದಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಬೆಸ್ಕಾಂ ಗ್ರಾಹಕ ಸಂವಾದ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ ಬೆಸ್ಕಾಂ ಕಚೇರಿ ನಗರ ಉಪವಿಭಾಗ-1ರ ಕಚೇರಿಯಲ್ಲಿ ಇಂದು ಮಧ್ಯಾಹ್ನ 3ರಿಂದ ಸಂಜೆ 5.30ರ ವರೆಗೆ ಗ್ರಾಹಕ ಸಂವಾದ ನಡೆಯಲಿದ್ದು, ಗ್ರಾಹಕರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು.




# ನಗರದಲ್ಲಿ ನಾಳೆ ವಾಸ್ಕ್ಯುಲರ್ ಚಿಕಿತ್ಸೆ

ದಾವಣಗೆರೆ, ಡಿ. 20- ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ತಜ್ಞ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ನಗರದ ಆರೈಕೆ ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 22ರ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಸಮಾಲೋಚನೆಗೆ ಲಭ್ಯವಿರುತ್ತಾರೆ.

ಕೈ ಮತ್ತು ಕಾಲುಗಳ ಊತ ಮತ್ತು ನೋವು, ಮಧುಮೇಹದ ಕಾಲು, ಡಯಾಲಿಸಿಸ್, ವಾಸಿಯಾಗದ ಗಾಯ, ಗ್ಯಾಂಗ್ರೀನ್ ಮುಂತಾದ ಸಮಸ್ಯೆಗಳ ಬಗ್ಗೆ 8050560580 ಮೊಬೈಲ್ ನಂಬರ್‌ಗೆ ಸಂಪರ್ಕಿಸಿ.

# ತರಳಬಾಳು ಬಡಾವಣೆ ಉದ್ಯಾನವನಕ್ಕೆ ಛೇರ್ಮನ್ ಸವಿತಾ ಗಣೇಶ್ ಭೇಟಿ



ದಾವಣಗೆರೆ, ಡಿ. 20- ಮಹಾನಗರ ಪಾಲಿಕೆಯ ವಾರ್ಡ್ ನಂ. 39 ರಲ್ಲಿ ತರಳಬಾಳು ಬಡಾವಣೆ 11ನೇ ಕ್ರಾಸ್‌ನಲ್ಲಿರುವ ಸಾರ್ವಜನಿಕ ಉದ್ಯಾನವನಕ್ಕೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಹುಲ್ಮನಿ ಗಣೇಶ್ ಭೇಟಿ ನೀಡಿದ್ದರು.

ಸುತ್ತಲಿನ ಮಹಿಳೆಯರ ಕೋರಿಕೆಯ ಮೇರೆಗೆ ಉದ್ಯಾನವನದಲ್ಲಿ ಮಹಿಳೆಯರಿಗಾಗಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಜೊತೆಗೆ ಯೋಗಾಸಕ್ತ ಮಹಿಳೆಯರಿಗಾಗಿ ಪ್ರತ್ಯೇಕ ಯೋಗ ವೇದಿಕೆ ನಿರ್ಮಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಇಲ್ಲಿ ನಡೆಸುವ ಯೋಗಾಭ್ಯಾಸದಿಂದ ಮಹಿಳೆಯರಿಗೆ ಸದೃಢ ಮನಸ್ಸು ಮತ್ತು ಆರೋಗ್ಯ ನಿರ್ಮಾಣ ವಾಗಲಿ ಎಂದು ಆಶಿಸಿದರು. ತುರ್ತಾಗಿ ಮುಂಜಾನೆ ವಾಕಿಂಗ್ ಮಾಡುವವರಿಗಾಗಿ ಪಾತ್ ವೇ ನಿರ್ಮಾಣದ ಜೊತೆಗೆ ಇತರೆ ಸೌಲಭ್ಯಗಳನ್ನೂ ಅಭಿವೃದ್ಧಿಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

# ನಗರದಲ್ಲಿಂದು ಸಾಂಸ್ಕೃತಿಕ ವೈಭವ

ದಾವಣಗೆರೆ, ಡಿ.20- ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡರ ಬಣ) ಪಾದಚಾರಿ ವ್ಯಾಪಾರಿ ನಗರ ಘಟಕದಿಂದ 69ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಾಂಸ್ಕೃತಿಕ ವೈಭವ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವನ್ನು ನಾಳೆ ದಿನಾಂಕ 21ರ ಶನಿವಾರ ಹಮ್ಮಿಕೊಳ್ಳಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಡಾ. ಮೋದಿ ವೃತ್ತದಲ್ಲಿ ಸಂಜೆ 6.30ಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಮಾರಂಭ ಉದ್ಘಾಟಿಸಲಿದ್ದಾರೆ. ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮೇಯರ್ ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಆಯುಕ್ತರಾದ ರೇಣುಕಾ, ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಇತರರು ಆಗಮಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಸನ್ಮಾನಿಸಲಾಗುವುದು. ದಾವಣಗೆರೆ ಫ್ರೆಂಡ್ಸ್ ಮೆಲೋಡಿ ಆರ್ಕೆಸ್ಟ್ರಾ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪಿ.ರಾಘವೇಂದ್ರ, ಸುರೇಶ್, ಚಂದ್ರಶೇಖರ್, ಬಸಮ್ಮ ಈಶ್ವರ್, ಮಲ್ಲಿಕಾರ್ಜುನ್, ಜಿ.ಎಸ್. ಸಂತೋಷ್, ಖಾದರ್ ಭಾಷಾ, ಆಟೋ ರಫೀಕ್ ಇತರರು ಉಪಸ್ಥಿತರಿದ್ದರು.

## ಕನ್ನಡ ಶಿಕ್ಷಕರ ನೇಮಕಕ್ಕೆ ಆಗ್ರಹ

ದಾವಣಗೆರೆ ತಾಲ್ಲೂಕು ವಡ್ಡಿನಹಳ್ಳಿಯಲ್ಲಿರುವ ವಿಕಲಚೇತನರ ಶಾಲೆಯಲ್ಲಿ ಕನ್ನಡ ಶಿಕ್ಷಕರಿಲ್ಲ. ಕೇವಲ ಉತ್ತರ ಭಾರತೀಯ ಶಿಕ್ಷಕರಿರುವ ಈ ಶಾಲೆಗೆ ಒಂದು ವಾರದಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸಬೇಕು. ಇಲ್ಲದಿದ್ದರೆ ಶಾಲೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು.

ಆವರಗೊಳ್ಳ ಕೇಂದ್ರೀಯ ವಿದ್ಯಾಲಯದಲ್ಲೂ ಕನ್ನಡ ಶಿಕ್ಷಕರಿಲ್ಲ. ಜಿಲ್ಲಾಧಿಕಾರಿಗಳು ಕೂಡಲೇ ಸಭೆ ನಡೆಸಿ ಕನ್ನಡ ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.








# ಶಾ ಹೇಳಿಕೆ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ

ದಾವಣಗೆರೆ, ಡಿ.20- ಸಂಸತ್ ಅಧಿವೇಶನದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ನಗರದ ಅಂಬೇಡ್ಕರ್ ವೃತ್ತದಲ್ಲಿ ಶಾ ಸಿದಿಗಿ ಮೆರವಣಿಗೆ ಸಹಿತ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪ್ರಜಾಪ್ರಭುತ್ವ ದೇಶದಲ್ಲಿ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಹಾಕಿಕೊಟ್ಟ ಸಂವಿಧಾನದಡಿ ಜನರು ಬದುಕು ಕಟ್ಟಿಕೊಂಡಿದ್ದಾರೆ. ಪ್ರಸ್ತುತ ಸಮಾಜದಲ್ಲಿ ನಾಗರಿಕರಿಗೆ ಸಮಗ್ರ ಸವಲತ್ತು ಸಿಕ್ಕಿದೆ ಎಂದಾದರೆ ಅದು ಅಂಬೇಡ್ಕರ್ ನೀಡಿದ ದೊಡ್ಡ ಕೊಡುಗೆ. ಅಂಬೇಡ್ಕರ್ ವಿರುದ್ಧ ಗೃಹಮಂತ್ರಿ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ಕಾಂಗ್ರೆಸ್ ಖಂಡಿಸುತ್ತದೆ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಬಿ. ಮಂಜಪ್ಪ ಹೇಳಿದರು.

ಬಿಜೆಪಿಗೆ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನದ ಬಗ್ಗೆ ಗೌರವ ಇಲ್ಲ. ಗಾಂಧೀಜಿ ಅವರನ್ನು ಕೊಂದ ಗೂಡ್ಸೆಗೆ ಅಭಿಷೇಕ ಮಾಡುವ ಬಿಜೆಪಿ ಮುಖಂಡರಿಗೆ ಅಂಬೇಡ್ಕರ್ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅಂಬೇಡ್ಕರ್ ಬಗ್ಗೆ ನೀಡಿದ ಅವಹೇಳನಕಾರಿ ಹೇಳಿಕೆಗೆ ದೇಶವೇ ಆಕ್ರೋಶ ವ್ಯಕ್ತಪಡಿಸಿದೆ. ಈ ಕೂಡಲೇ ಅವರು ರಾಜೀನಾಮೆ ನೀಡಬೇಕು. ದೇಶದ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್, ಕಾಂಗ್ರೆಸ್ ಪರಿಶಿಷ್ಟ ಜಾತಿ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಎಚ್. ವೀರಭದ್ರಪ್ಪ, ಪಾಲಿಕೆ ಸದಸ್ಯ ಎ.ನಾಗರಾಜ್, ಅಯೂಬ್ ಪೈಲ್ವಾನ್, ಕೆ.ಜಿ.ಶಿವಕುಮಾರ್, ರಾಕೇಶ್, ಎಸ್. ಮಲ್ಲಿಕಾರ್ಜುನ್, ಬಿ.ಕೆ.ಪರಶುರಾಮ್, ಅನಿತಾಬಾಯಿ ಮಾಲತೇಶ ಜಾಧವ್, ಸಾಗರ್, ಜಯಣ್ಣ, ಜಿ.ಸಿ. ನಿಂಗಪ್ಪ ಉಪಸ್ಥಿತರಿದ್ದರು.




# ರವಿ ಮೇಲಿನ ಹಲ್ಲೆಗೆ ಬಿಜೆಪಿ ಖಂಡನೆ, ಪ್ರತಿಭಟನೆ

ದಾವಣಗೆರೆ, ಡಿ. 20- ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ, ಅವರನ್ನು ಬಂಧಿಸಿರುವುದು ಹಾಗೂ ಅವರ ಮೇಲೆ ಮಾರಣಾಂತಿಕ ಹಲ್ಲೆಗೆ ಯತ್ನ ನಡೆಸಿರುವುದು ಅನಾಗರಿಕ ವರ್ತನೆ. ಇದೊಂದು ರೌಡಿಸಂ ಕೃತ್ಯ ಎಂದು ಜಿಲ್ಲಾ ಬಿಜೆಪಿ ಆರೋಪಿಸಿದೆ.

ನಗರದ ಬಿಜೆಪಿ ಕಚೇರಿಯಿಂದ ಮಹಾತ್ಮ ಗಾಂಧಿ ವೃತ್ತದ ಮೂಲಕ ಪ್ರತಿಭಟನಾ ಮೆರವಣಿಗೆ ನಡೆಸಿದ ಬಿಜೆಪಿ ಮುಖಂಡರು, ಉಪ ವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ, ಸರ್ಕಾರದ ನಡೆಗೆ ತೀವ್ರ ಖಂಡನೆ ವ್ಯಕ್ತಪಡಿಸಿ, ಉಪ ವಿಭಾಗಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಡಾ. ಅಂಬೇಡ್ಕರ್ ಅವರನ್ನು ಗೌರವಿಸಿದ್ದು ನಮ್ಮ ಪಕ್ಷ. ಆದರೆ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದ ಕಾಂಗ್ರೆಸ್, ಅಂಬೇಡ್ಕರ್ ಹೆಸರಿನಲ್ಲಿ ಕಾನೂನು ಸುವ್ಯವಸ್ಥೆ ಹಾಳು ಮಾಡುತ್ತಿದೆ ಎಂದು ಹೇಳಿದರು.

ವಿಧಾನಸೌಧದ ಆವರಣದಲ್ಲಿ ಪಾಕ್ ಪರ ಘೋಷಣೆ ಕೂಗಿದವರನ್ನು ಇಷ್ಟು ಶೀಘ್ರ ಬಂಧಿಸಲಿಲ್ಲ. ಭಯೋತ್ಪಾದಕರನ್ನು ರಕ್ಷಿಸುವ ಕಾಂಗ್ರೆಸ್ ದೇಶದಿಂದ ತೊಲಗಬೇಕಿದೆ ಎಂದರು.


ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್ ಮಾತನಾಡಿ, ರವಿಯವರ ಮೇಲೆ ಆರೋಪ ಬಂದಾಕ್ಷಣ ಅವರನ್ನು ಬಂಧಿಸಲಾಗಿದೆ. ಆದರೆ ಅಂದು ಪಾಕ್ ಪರ ಘೋಷಣೆ ಕೂಗಿದವರನ್ನು ತಿಂಗಳಾದರೂ ಬಂಧಿಸಿರಲಿಲ್ಲ. ಇದು ಕಾಂಗ್ರೆಸ್‌ನ ಇಬ್ಬಗೆಯ ನೀತಿಯಲ್ಲವೇ? ಕಾನೂನು ಸುವ್ಯವಸ್ಥೆ ರಾಜ್ಯದಲ್ಲಿ ಹಾಳಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಾವಣಗೆರೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಸಿ.ಟಿ. ರವಿ ಅವರ ಹೇಳಿಕೆ ಖಂಡಿಸುವುದಾಗಿ ಹೇಳಿದ್ದಾರೆ. ಆದರೆ ಅವರ ಪಕ್ಷದ ಮುಖಂಡ ರಾಹುಲ್ ಗಾಂಧಿ ದಲಿತ ಸಂಸದೆಯವರ ಮೇಲೆ ಅನುಚಿತವಾಗಿ ವರ್ತಿಸಿದ್ದಾರೆ. ಅದನ್ನೇಕೆ ಖಂಡಿಸುವುದಿಲ್ಲ ? ಎಂದು ಪ್ರಶ್ನಿಸಿದರು.

ಅಂಬೇಡ್ಕರ್ ಮೃತಪಟ್ಟಾಗ ಶವ ಸಂಸ್ಕಾರಕ್ಕೂ ಜಾಗ ಕೊಡದ ಕಾಂಗ್ರೆಸ್ ಪಕ್ಷದವರು ಕೇವಲ ವೋಟ್ ಬ್ಯಾಂಕ್‌ಗಾಗಿ ಅವರನ್ನು ಬಳಸಿಕೊಳ್ಳುವುದನ್ನು ಕೈ ಬಿಡಬೇಕು ಎಂದರು.

ವಿಧಾನಸೌಧದಲ್ಲಿ ಅಕ್ರಮವಾಗಿ ಪ್ರವೇಶಿಸಿ, ಸಿ.ಟಿ.ರವಿಯವರ ಮೇಲೆ ಮಾರಣಾಂತಿಕ ಹಲ್ಲೆಗೆ ಯತ್ನಿಸಿದ ಲಕ್ಷ್ಮೀ ಹೆಬ್ಬಾಳ್ಕರ್ ರವರ ಖಾಸಗಿ ಆಪ್ತ ಸಹಾಯಕ ಸಂಗನಗೌಡ ಮತ್ತವರ ಚೇಲಾಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಮತ್ತು ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಸಿ.ಟಿ.ರವಿಯವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 75ರಡಿ ಲೈಂಗಿಕ ಕಿರುಕುಳ ಮತ್ತು ಕಲಂ 79ರಡಿ ಮಹಿಳೆಯರ ಮಾನಕ್ಕೆ ಕುಂದು ತರುವಂತಹ ಪದ ಬಳಕೆ ಮಾಡಲಾಗಿದೆ ಎಂದು ಪ್ರಕರಣ ದಾಖಲಿಸಲಾಗಿರುವುದನ್ನು ರದ್ದುಪಡಿಸಬೇಕು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲವಾಗಿದೆ. ರಾಜ್ಯ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಡಳಿತವನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಲಾಯಿತು.


ಮಾಜಿ ಶಾಸಕ ಬಸವರಾಜ ನಾಯ್ಕ, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ ಕಡ್ಲೇಬಾಳ್, ಅಣ್ಣೇಶ್ ಐರಣಿ, ನಿಕಟಪೂರ್ವ ಅಧ್ಯಕ್ಷ ವೀರೇಶ್ ಹನಗವಾಡಿ, ಬಿ.ಎಸ್. ಜಗದೀಶ್, ರಾಜ್ಯ ಒಬಿಸಿ ಮೋರ್ಚಾ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಹಾಗೂ ಕಾರ್ಯಕರ್ತರುಗಳು ಪ್ರತಿಭಟನೆಯಲ್ಲಿದ್ದರು.



## ನಗರದಲ್ಲಿ ಇಂದು ಭೀಮಾಂಜನೆಯ ಸ್ವಾಮಿ ಕಾರ್ತಿಕೋತ್ಸವ

ಹಳೆ ತಾಲ್ಲೂಕು ಕಚೇರಿ ಹತ್ತಿರ ಇರುವ ಶ್ರೀ ಭೀಮಾಂಜನೆಯ ಸ್ವಾಮಿ ಕಾರ್ತಿಕ ಉತ್ಸವವನ್ನು ಇಂದು ಸಂಜೆ ಆಚರಿಸಲಾಗುವುದು ಎಂದು ಪ್ರಧಾನ ಅರ್ಚಕ ಎಸ್.ವಿ. ಅಣ್ಣಪ್ಪ ತಿಳಿಸಿದ್ದಾರೆ.

## ಶ್ಯಾಬನೂರಿನಲ್ಲಿ ಇಂದು ಕಾರ್ತಿಕೋತ್ಸವ, ಸಾಮೂಹಿಕ ವಿವಾಹ



ದಾವಣಗೆರೆ - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕ ದೀಪೋತ್ಸವವು ಇಂದು ಸಂಜೆ ನಡೆಯಲಿದೆ. ಕಾರ್ತಿಕೋತ್ಸವದ ಪ್ರಯುಕ್ತ ಬೆಳಿಗ್ಗೆ 10.30ಕ್ಕೆ ಸಾಮೂಹಿಕ ವಿವಾಹವನ್ನು ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ.

## ಸಿ.ಟಿ. ರವಿ ವಿರುದ್ಧ ಅಗತ್ಯ ಕಾನೂನು ಕ್ರಮಕ್ಕೆ ಎಸ್ಸೆಸ್ ಒತ್ತಾಯ

ದಾವಣಗೆರೆ, ಡಿ. 20- ಬೆಳಗಾವಿಯ ಸುವರ್ಣಸೌಧದಲ್ಲಿ ಪರಿಷತ್ ಕಲಾಪದ ಸಂದರ್ಭದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಮತ್ತು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರ ಮಧ್ಯೆ ನಡೆದ ಮಾತಿನ ಚಕಮಕಿಯಲ್ಲಿ ರವಿ ಅವರು ಲಕ್ಷ್ಮಿ ಹೆಬ್ಬಾಳಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿರುವುದನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಖಂಡಿಸಿದ್ದಾರೆ.

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಸ್ಥಾನಮಾನ ಮತ್ತು ಗೌರವ ನೀಡಲಾಗಿದೆ. ನಾಲಿಗೆ ನಾಗರಿಕತೆ ಹೇಳುತ್ತದೆ. ಜನಪ್ರತಿನಿಧಿಗಳು ಸದನದ ಗೌರವ, ಘನತೆ ಕಾಪಾಡಬೇಕು. ಸದನದ ಒಳಗೆ ಹಾಗೂ ಹೊರಗೆ ಜನಪ್ರತಿನಿಧಿಗಳ ನಡವಳಿಕೆಗಳು ಇತರರಿಗೆ ಮಾದರಿಯಾಗಿರಬೇಕು. ಅಸಾಂವಿಧಾನಿಕ ಪದಬಳಕೆ ಸದನದ ಇತಿಹಾಸಕ್ಕೆ ಕಪ್ಪುಚುಕ್ಕೆ. ಅವಾಚ್ಯ ಪದ ಬಳಕೆ ಮಾಡಿರುವುದನ್ನು ಅಖಿಲ ಭಾರತ ವೀರಶೈವ ಮಹಾಸಭಾ ತೀವ್ರವಾಗಿ ಖಂಡಿಸುತ್ತದೆ. ರವಿ ಅವರ ವಿರುದ್ಧ ಅಗತ್ಯ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ.

## 'ಗ್ರಾಮ ಕಾಯಕ ಮಿತ್ರ' ಹುದ್ದೆಗೆ ಅರ್ಜಿ

**ಹೊನ್ನಾಳಿ**

ಹೊನ್ನಾಳಿ, ಡಿ.20- ತಾಲ್ಲೂಕಿನ ಹನುಮಸಾಗರ ಗ್ರಾಮ ಪಂಚಾಯಿತಿಯಲ್ಲಿ ಖಾಲಿ ಇರುವ 'ಗ್ರಾಮ ಕಾಯಕ ಮಿತ್ರ' 1 ಹುದ್ದೆಗೆ ಗೌರವ ಧನ ಪಾವತಿ ಆಧಾರದ ಮೇಲೆ ಅರ್ಹ ಮಹಿಳೆಯರಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನೇಮಕಾತಿ ಮಾಡಿಕೊಳ್ಳಲಿದ್ದು, ಹನುಮಸಾಗರ ಗ್ರಾಮ ಪಂಚಾಯಿತಿಯಲ್ಲಿ ಇದೇ ದಿನಾಂಕ 23ರಿಂದ ಅರ್ಜಿ ಪಡೆಯಬಹುದಾಗಿದ್ದು, ಜ.8 ಅರ್ಜಿ ಸಲ್ಲಿಕೆಗೆ ಕೊನೆ ದಿನವಾಗಿದೆ. ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಸಂಪರ್ಕಿಸಿ.

## ರವಿ ಪರಿಷತ್ ಸದಸ್ಯತ್ವ ವಜಾಕ್ಕೆ ಒತ್ತಾಯ

ದಾವಣಗೆರೆ, ಡಿ. 20 - ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಅವರು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕುರಿತಾಗಿ ಕೆಟ್ಟ ಪದ ಬಳಸಿದ್ದು ಖಂಡನೀಯ. ತಕ್ಷಣವೇ ಅವರ ಸದಸ್ಯತ್ವ ವಜಾಗೊಳಿಸಬೇಕು ಎಂದು ಬಿ. ವೀರಣ್ಣ ಆಗ್ರಹ ಮಾಡಿದ್ದಾರೆ

## ನಗರದಲ್ಲಿ ಇಂದು ಕನ್ನಡ ಹಬ್ಬ

ದಾವಣಗೆರೆ, ಡಿ.20- ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ 3ನೇ ವರ್ಷದ ಕನ್ನಡ ಹಬ್ಬ ಹಾಗೂ 69ನೇ ಕನ್ನಡ ರಾಜ್ಯೋತ್ಸವವನ್ನು ಡಿ.21ರ ಇಂದು ಸಂಜೆ 5.30ಕ್ಕೆ ಇಲ್ಲಿನ ಜಯದೇವ ವೃತ್ತದ ಶಿವಯೋಗಿ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ವಿ. ಅವಿನಾಶ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಕೆ.ಎಸ್. ಬಸವಂತಪ್ಪ ಕನ್ನಡಾಂಬೆಯ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದು, ದಾವಣಗೆರೆ ವಿವಿ ಕುಲಪತಿ ಬಿ.ಡಿ. ಕುಂಬಾರ್ ಸಮಗ್ರ ಕರವೇ ಪದಾಧಿಕಾರಿಗಳಿಗೆ ಗುರುತಿನ ಚೀಟಿ ವಿತರಿಸಲಿದ್ದಾರೆ ಮತ್ತು ಸಂಘದ ರಾಜ್ಯಾಧ್ಯಕ್ಷ ವಿ. ಅವಿನಾಶ್ ಅಧ್ಯಕ್ಷತೆ ವಹಿಸುವರು.

ವೇದಿಕೆ ಕಾರ್ಯಕ್ರಮದ ನಂತರ ಭಾರತಿ ಮೆಲೋಡಿ ಆರ್ಕೆಸ್ಟ್ರಾ ವೃಂದದ ವತಿಯಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ.

ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಾಲಾ ನಾಗರಾಜ್, ರೆಹಮಾನ್ ಖಾನ್, ಸೈಯ್ಯದ್ ಇಮ್ತಿಯಾಜ್, ಜಗದೀಶ್, ಡಿ.ಜೆ. ರಾಘವೇಂದ್ರ, ಭೋಜರಾಜ್, ಆನಂದ್, ಫಯಾಜ್ ಅಹಮದ್ ಸುದ್ದಿಗೋಷ್ಠಿಯಲ್ಲಿದ್ದರು.


**ಶಿವ ಸಹಕಾರಿ ಬ್ಯಾಂಕ್ ನಿಯಮಿತ,**

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001. ಪೋ.ನಂ. 08192-256107

**ಬ್ಯಾಂಕಿನ ಸದಸ್ಯರ ಗಮನಕ್ಕೆ**

ದಿನಾಂಕ: 22-12-2024ರ ಭಾನುವಾರದಂದು ನಡೆಯುವ ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಗೆ ಸಂಬಂಧಪಟ್ಟಂತೆ ಬ್ಯಾಂಕಿನಿಂದ ನೀಡಲ್ಪಟ್ಟ ಭಾವಚಿತ್ರಗಳನ್ನೊಳಗೊಂಡ ಗುರುತಿನ ಚೀಟಿಯನ್ನು ಮತದಾನದ ವೇಳೆಯಲ್ಲಿ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಮತದಾನ ಮಾಡಲು ಅನುಕೂಲವಾಗುವಂತೆ ಗುರುತಿನ ಚೀಟಿ ಪಡೆಯದೇ ಇರುವ ಬ್ಯಾಂಕಿನ ಸದಸ್ಯರು ಇತ್ತೀಚಿನ 3 ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಪ್ರಧಾನ ಕಛೇರಿಯಲ್ಲಿ ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಈ ಮೂಲಕ ಕೋರಲಾಗಿದೆ.

ಸಹಿ/-

ಸ್ಥಳ: ದಾವಣಗೆರೆ.
ದಿನಾಂಕ: 19.12.2024

**ಪ್ರಭಾರಿ ಪ್ರಧಾನ ವ್ಯವಸ್ಥಾಪಕರು,**
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.







## 23ಕ್ಕೆ ಕಾಯಿಪೇಟೆ ಬಸವೇಶ್ವರ ಕಾರ್ತಿಕ 24ರಂದು ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ



ದಾವಣಗೆರೆ, ಡಿ. 20- ನಗರದ ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ವತಿಯಿಂದ ನಾಡಿದ್ದು ದಿನಾಂಕ 23ರ ಸೋಮವಾರ 9 ಗಂಟೆಗೆ ಕಡೆ ಕಾರ್ತಿಕೋತ್ಸವ ನಡೆಯಲಿದೆ. 24ರ ಮಂಗಳವಾರ ಮತ್ತು 25ರ ಬುಧವಾರ ನಗರದ ಪೂಜಾ ಇಂಟರ್‌ನ್ಯಾಷನಲ್ ಪಕ್ಕದಲ್ಲಿರುವ ಶ್ರೀ ಮಹೇಶ್ವರ ಸ್ವಾಮಿಯ ನಿವೇಶನದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆ ನಡೆಯಲಿದೆ.

## ನಾಳೆ ಶ್ರೀ ಜಿಹ್ವೇಶ್ವರ ಸ್ವಾಮಿ ಕಾರ್ತಿಕ



ದಾವಣಗೆರೆ, ಡಿ. 20- ನಗರದ ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್) ದ ಬಳಿಯ ಸ್ವಕುಳಸಾಳಿ ಸಮಾಜದ ಶ್ರೀ ಜಿವ್ಹೇಶ್ವರ ಧ್ಯಾನ ಮಂದಿರದಲ್ಲಿ ಸ್ವಕುಳಸಾಳಿ ಸಮಾಜದ ಮಹಿಳಾ ಮಂಡಳಿ ವತಿಯಿಂದ ನಾಡಿದ್ದು ದಿನಾಂಕ 23ರ ಸೋಮವಾರ ಸಂಜೆ 5.30ಕ್ಕೆ ಶ್ರೀ ಜಿಹ್ವೇಶ್ವರ ಸ್ವಾಮಿಯ ಕಾರ್ತಿಕ ದೀಪೋತ್ಸವ ನಡೆಯಲಿದೆ. ಸಮಾಜ ಬಾಂಧವರು, ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಹಿಳಾ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಸುಜಾತ ರೋಖಡೆ ಕೋರಿದ್ದಾರೆ.





# ಶಿವ ಸಹಕಾರಿ ಬ್ಯಾಂಕ್ ನಿಯಮಿತ

## ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ.

## ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ-2024

### ಹಿಂದುಳಿದ ವರ್ಗ 'ಬಿ' ಮೀಸಲು ಮತ ಕ್ಷೇತ್ರ

ಮಾನ್ಯ ಮತದಾರ ಬಂಧುಗಳೇ, ದಿನಾಂಕ : 22.12.2024ನೇ ಭಾನುವಾರ 5 ವರ್ಷಗಳ ಅವಧಿಗೆ ನಡೆಯಲಿರುವ ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ "ಹಿಂದುಳಿದ ವರ್ಗ "ಬಿ" ಮೀಸಲು ಮತ ಕ್ಷೇತ್ರ"ದಿಂದ ಕ್ರ.ಸಂ. 2 ಜೆ.ಎಸ್. ಸಿದ್ದಪ್ಪ ಆನೆಕೊಂಡ ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಈ ಕೆಳಕಂಡ ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

ಬ್ಯಾಲೆಟ್ ನಮೂನೆ

| ಕ್ರ.ಸಂ. | | ಉಮೇದುವಾರರ ಹೆಸರು | ಚಿಹ್ನೆ | ಗುರುತು |
|---|---|---|---|---|
| 1 | | | | |
| 2 |  | ಜೆ.ಎಸ್. ಸಿದ್ದಪ್ಪ | | |

### ಮಹಿಳಾ ಮೀಸಲು ಮತ ಕ್ಷೇತ್ರ

ಮಾನ್ಯ ಮತದಾರ ಬಂಧುಗಳೇ, ದಿನಾಂಕ : 22.12.2024ನೇ ಭಾನುವಾರ 5 ವರ್ಷಗಳ ಅವಧಿಗೆ ನಡೆಯಲಿರುವ ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ "ಮಹಿಳಾ ಮೀಸಲು ಮತ ಕ್ಷೇತ್ರ"ದಿಂದ ಕ್ರ.ಸಂ. 2 ಡಾ|| ಲೀಲಾ ದಯಾನಂದ್ ಮತ್ತು ಕ್ರ.ಸಂ. 3 ಕೆ.ಜಿ. ಶಂಕ್ರಮ್ಮ ಆದ ನಾವು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ನಮ್ಮ ಈ ಕೆಳಕಂಡ ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | | ಉಮೇದುವಾರರ ಹೆಸರು | ಚಿಹ್ನೆ | ಗುರುತು |
|---|---|---|---|---|
| 1 | | | | |
| 2 |  | ಡಾ|| ಲೀಲಾ ದಯಾನಂದ್ | | |
| 3 |  | ಕೆ.ಜಿ. ಶಂಕ್ರಮ್ಮ | | |


ನಾವುಗಳು ಸರ್ವ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಿನಾಂಕ : 22.12.2024ರ ಭಾನುವಾರದಂದು ನಡೆಯುವ ಮೂರು ಸ್ಥಾನಗಳ ಮೇಲ್ಕಂಡ ಅಭ್ಯರ್ಥಿಗಳಿಗೆ ತಮ್ಮ ಅಮೂಲ್ಯ ಮತ ನೀಡುವ ಮೂಲಕ ಇವರುಗಳನ್ನು ಜಯಶೀಲರನ್ನಾಗಿ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಲು ಕೋರುತ್ತೇವೆ. ಕಾಲಾವಕಾಶದ ಕೊರತೆಯಿಂದಾಗಿ ತಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದ ಕಾರಣ ತಾವುಗಳೆಲ್ಲರೂ ಸದರಿ ದಿನದಂದು ಬಿಡುವು ಮಾಡಿಕೊಂಡು ಮತದಾನ ಮಾಡಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

* ಎಂ.ಬಿ. ಸಂಗಮೇಶ್ವರ ಗೌಡ * ಸಿ. ಚಂದ್ರಶೇಖರ್ * ಶಿವಕುಮಾರ್ ಡಿ.ಎಂ. * ಸಿ. ದೊಡ್ಡಬಸಪ್ಪ * ಜಯಪ್ಪ ಹೆಚ್. * ದೊಗ್ಗಳ್ಳಿ ಬಸವರಾಜ್ * ಡಾ|| ಹೆಚ್.ಎಸ್. ಮಂಜುನಾಥ್ * ವಾಗೀಶ್ ಬಾಬು ಜಿ.ಪಿ. * ಅನಿತ ಡಿ.ಎಲ್.

ಮತದಾನ ದಿನಾಂಕ : 22.12.2024ರ ಭಾನುವಾರ ಸಮಯ : ಬೆಳಗ್ಗೆ 9.00 ರಿಂದ ಸಂಜೆ 4.00
ಸ್ಥಳ : ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ,
ತರಳಬಾಳು ಬಡಾವಣೆ, ದಾವಣಗೆರೆ.

ತಮ್ಮ ಸೇವಾಕಾಂಕ್ಷಿ : ಜೆ.ಎಸ್. ಸಿದ್ದಪ್ಪ ಆನೆಕೊಂಡ ಮೊ. : 81236 79157
ಡಾ || ಲೀಲಾ ದಯಾನಂದ್ ಕೋಂ. ದಯಾನಂದ್ ಸರಸ್ವತಿ ಎಂ.ಸಿ. ಮೊ. : 81059 57440
ಕೆ.ಜಿ. ಶಂಕ್ರಮ್ಮ ಕೋಂ. ಜೆ. ಶಂಕರ್ (ಸೋಮನಾಥ್ ರೈಸ್ ಮಿಲ್) ಮೊ. : 96200 00631

ಸೂಚನೆ : ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ...


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas